

ರಾಮಾ ರಾಮಾ ರೇ... ಕನ್ನಡತನದ ಯತ್ನ

ಅವನಿಗೆ ಸಿನಿಮಾದ ಮೂಲಕ ದಕ್ಕಿಬಿಡುತ್ತದೆ. ಹೀಗೆ ತಾನು ರೂಪುಗೊಳ್ಳುವ ನಾಡು–ನುಡಿಯ ನಾಡಿಯ ಸ್ವರೂಪವನ್ನು ಹೊಂದುವ ಮೂಲಕ ಸಿನಿಮಾಕ್ಕೊಂದು ಸಾಂಸ್ಕೃತಿಕ ಸ್ವರೂಪ ದೊರೆಯುತ್ತದೆ.

'ತಿಥಿ'ಯ ಇನ್ನೊಂದು ದಿಕ್ಕಿನಲ್ಲಿ 'ಏನ್... ನಿನ್... ಪ್ರಾಬ್ಲಮ್ಮು...' ಚಿತ್ರವನ್ನು ಗಮನಿಸಬಹುದು. 'ತಿಥಿ' ಚಿತ್ರದ ಮುಖ್ಯ ಪಾತ್ರಗಳಲ್ಲಿ ಕಾಣಿಸಿಕೊಂಡ ವ್ಯಕ್ತಿಗಳೇ ಇಲ್ಲಿಯೂ ನಟಿಸಿದ್ದಾರೆ. 'ತಿಥಿ' ಚಿತ್ರದ ಭಾಷೆಯ ಅನುಕರಣೆಯೇ ಇಲ್ಲೂ ಇದೆ. ಆದರೆ, ಇದೆಲ್ಲ ವ್ಯಾಪಾರಿ ತಂತ್ರವಾಗಿ ಬಳಕೆಯಾಗಿದೆಯೇ ಹೊರತು ಕನ್ನಡದ ಸೊಗಡನ್ನು ಒಳಗೊಳ್ಳುವ ರೂಪದಲ್ಲಲ್ಲ. ಭಾಷೆ ಹಾಗೂ ಭಾವಗಳು ಇಲ್ಲಿ ಲೈಂಗಿಕ ಭಾವನೆಗಳನ್ನು ಪ್ರಚೋದಿಸುವಂತಿವೆ. ಅಂದರೆ, 'ತಿಥಿ' ಚಿತ್ರಕ್ಕಿರುವ ಸಾಂಸ್ಕೃತಿಕ ಮಹತ್ವ ಈ ಸಿನಿಮಾಕ್ಕಿಲ್ಲ. ಹೀಗೆ ಸಾಂಸ್ಕೃತಿಕ ಸ್ವರೂಪವೇ ಇಲ್ಲದ ಸಿನಿಮಾಗಳನ್ನು ಕೇವಲ ಶಾಬ್ದಿಕ ಕಾರಣಗಳಿಗಾಗಿ 'ಕನ್ನಡ ಚಿತ್ರ'ಗಳು ಎನ್ನಬಹುದೇ?

ನಮ್ಮ ನೆರೆಯ ಮಲೆಯಾಳಂ ಹಾಗೂ ತಮಿಳು ಭಾಷೆಗಳಲ್ಲಿನ ಚಿತ್ರಗಳನ್ನು ಹೋಲಿಸಿ ನೋಡಿದರೆ, ಕನ್ನಡ ಸಿನಿಮಾಗಳು ಸಾಂಸ್ಕೃತಿಕ ಪ್ರಜ್ಞೆಯ ಕೊರತೆಯಿಂದ ಬಳಲುತ್ತಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ. ಇತ್ತೀಚಿನ ವರ್ಷಗಳಲ್ಲಿ 'ಟೈಟಲ್ ಪ್ರಾಬ್ಲಂ' ಮಲೆಯಾಳಿ ಚಿತ್ರೋದ್ಯಮದಲ್ಲೂ ಕಾಣಿಸಿಕೊಂಡಿದೆ. ಇಂಗ್ಲಿಷ್ ಶೀರ್ಷಿಕೆಗಳನ್ನು ಹೊಂದಿರುವ ಮಲೆಯಾಳಂ ಸಿನಿಮಾಗಳ ಸಂಖ್ಯೆ ಹೆಚ್ಚುತ್ತಿದೆ. ಈ ಮಂಗ್ಲಿಷ್ ಶೀರ್ಷಿಕೆಗಳ ಬಗ್ಗೆ ಕೇರಳ ಚಿತ್ರರಸಿಕರಲ್ಲಿ ಜೋರು ಚರ್ಚೆಗಳೂ ನಡೆದಿವೆ. 'ಶೀರ್ಷಿಕೆಗಳು ಕಡ್ಡಾಯವಾಗಿ ಮಲಯಾಳಂನಲ್ಲಿ ಇರಬೇಕು. ಇಂಗ್ಲಿಷ್ ಶೀರ್ಷಿಕೆಗಳನ್ನು ಹೊಂದಿರುವ ಚಿತ್ರಗಳಿಗೆ ಸಬ್ಸಿಡಿ ಕಡಿತಗೊಳಿಸಬೇಕು' ಎಂದು ಅಡೂರು ಗೋಪಾಲಕೃಷ್ಣನ್ ಅಧ್ಯಕ್ಷತೆಯ ಸಮಿತಿಯೊಂದು ಅಭಿಪ್ರಾಯಪಟ್ಟಿತ್ತು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಅಂಥ ಚಿತ್ರಗಳನ್ನು ನಿಷೇಧಿಸಿದರೂ ತಪ್ಪಿಲ್ಲ ಎಂದು ಕೆಲವರು ಹೇಳಿದ್ದರು.

ಆದರೆ, ಕೇರಳ ಚಿತ್ರರಂಗದ ಈ ಆತಂಕ ಶೀರ್ಷಿಕೆಗಳಿಗೆ ಸಂಬಂಧಿಸಿದ್ದಷ್ಟೇ. ಹೂರಣದ ವಿಷಯಕ್ಕೆ ಬರುವುದಾದರೆ, ಒಂದು ನೆಲದ ಸಂಸ್ಕೃತಿಯನ್ನು ಹೇಗೆ ಕಟ್ಟಿಕೊಡಬೇಕು ಎನ್ನುವುದಕ್ಕೆ ಮಲೆಯಾಳಿ ಚಿತ್ರಗಳು ಸಿನಿಮಾ ಜಗತ್ತಿನ ಅತ್ಯುತ್ತಮ ಉದಾಹರಣೆಗಳು. ಭಾಷೆ ಎನ್ನುವುದು ಅಲ್ಲಿ ಒಂದು ಸಲಕರಣೆಯಷ್ಟೇ; ಪಾತ್ರಗಳ ವೇಷಭೂಷಣದಲ್ಲಿ, ತೆರೆಯ ಮೇಲೆ ಕಾಣುವ ವ್ಯಕ್ತಿತ್ವಗಳಲ್ಲಿ, ಸಿನಿಮಾ ಒಳಗೊಳ್ಳುವ ಪರಿಸರದಲ್ಲಿ – ಎಲ್ಲ ರೀತಿಯಲ್ಲೂ

